**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿಸಿ ನಂಬರ : 39/2022**

| | | | |
|---|---|---|---|
| ಸಾಕ್ಷಿಯ ಹೆಸರು | : | ಮುಸ್ತಫಾ ಅಲಿಯಾಸ್ ಬಾಬು | ಸಿ.ಡಬ್ಲ್ಯು 5 |
| ತಂದೆಯ ಹೆಸರು | : | ಎಸ್ ಎ ರಹೀಮ್ | ಪಿ.ಡಬ್ಲ್ಯು 5 |
| ವಯಸ್ಸು | : | 45 ವರ್ಷ | |
| ಉದ್ಯೋಗ | : | ಟ್ರಾನ್ಸ್ ಪೋರ್ಟ್ ಉದ್ಯೋಗ | |
| ವಾಸ ಸ್ಥಳ | : | ತರೀಕೆರೆ | |

**ದಿನಾಂಕ: 20-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-**

ನನಗೆ ಚಾಸಾ-2 ಮತ್ತು 6 ರವರ ಪರಿಚಯ ಇಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಯಾವುದೇ ಅಪಘಾತವನ್ನು ಪ್ರತ್ಯೇಕ್ಷವಾಗಿ ನೋಡಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿಯನ್ನು ಈ ಹಿಂದೆ ನಾನು ಯಾವತ್ತೂ ನೋಡಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:-**

ದಿನಾಂಕ 24-06-2021 ರಂದು ಬೆಳಗ್ಗೆ 6 ಗಂಟೆಗೆ ನಾನು ಮತ್ತು ಚಾಸಾ-6 ರವರು ಸೇರಿ ತರೀಕೆರೆಯ ವಿ ಐ ಎಲ್ ಫ್ಯಾಕ್ಟರಿ ಎದುರಿನಲ್ಲಿರುವ ಪಂಚರ್ ಶಾಪನಲ್ಲಿ ಹತ್ತಿರ ನಿಂತಿದ್ದಾಗ ಒಂದು ಲಾರಿಯು ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಬಂದು ಬಿ ಹೆಚ್ ರಸ್ತೆಯಲ್ಲಿರುವ ಮಧುಲೋಕ ವೈನ್ ಟವರಿನ್ ಅಂಗಡಿಯ ಎದುರಿನ ರಸ್ತೆಯಲ್ಲಿ ಚಾಸಾ-2 ರವರು ಬರುತ್ತಿದ್ದ ಬೈಕಿಗೆ ಟಕ್ಕರ್ ಕೊಟ್ಟನು ಎಂದರೆ ಸರಿಯಲ್ಲ. ನಾವುಗಳು ಉಪಚರಿಸಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು ಎಂದರೆ ಸರಿಯಲ್ಲ. ಅಪಘಾತಪಡಿಸಿದ ಲಾರಿಯ ನಂಬರನ್ನು ನಾನು ನೋಡಿಲ್ಲ. ತನಿಖೆ ವೇಳೆ ಪೊಲೀಸರು ಸಿಸಿ ಟಿವಿ ದೃಷ್ಯಾವಳಿಗಳನ್ನು ನನಗೆ ತೋರಿಸಿದ್ದಾಗೆ ಎಂದರೆ ಸರಿಯಲ್ಲ. ಅದರ ಆಧಾರ ಮೇಲೆ ಅಪಘಾತಪಡಿಸಿದ ವಾಹನ ಮತ್ತು ಆರೋಪಿಯನ್ನು ನಾನು ಗುರುತಿಸಿದ್ದೇನೆ ಎಂದರೆ ಸರಿಯಲ್ಲ. ಈ ಮೇಲಿನ ರೀತಿ ಪೊಲೀಸರಿಗೆ ಹೇಳಿಕೆಯನ್ನು ಕೂಡಾ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ.5 ಎಂದು ಗುರುತಿಸಲಾಯಿತು. ನಿಪಿ.5 ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಕೂಡಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:**

**ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

*ಓ ಹೇ ಕೇ ಸ ಇ ಎ ಒ*

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***